*ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿಯಿತು.*

*ಶ್ರೀ ಕೆ.ಹೆಚ್.ಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಶನ್. ಇದೇ ವಿಚಾರದಲ್ಲಿ ದಯವಿಟ್ಟು ಅವಕಾಶ ಕೊಡಿ.*

*ಅಧ್ಯಕ್ಷರು: ಇಲ್ಲ, ಒಂದಕ್ಕೊಂದು ಬೆಳೆದುಕೊಂಡು ಹೋಗುತ್ತದೆ. ನೀವು ಅವರ ಗಮನಕ್ಕೆ ತನ್ನಿ.*

*ಶ್ರೀ ಕೆ.ಹೆಚ್.ಹನುಮೇಗೌಡ: ದಯವಿಟ್ಟು ಅವಕಾಶ ಕೊಡಿ. ನಮಗೆ ತೊಂದರೆಯಾಗುತ್ತಿದೆ.*

*ಅಧ್ಯಕ್ಷರು: ಮುಖ್ಯಮಂತ್ರಿಗಳು ನನ್ನ ಗಮನಕ್ಕೆ ತನ್ನಿಯೆಂದು ಹೇಳಿದ ಮೇಲೆ ನೀವು ಏಕೆ ಮತ್ತೆ ಕೇಳುತ್ತೀರಿ? ವೆರಿ ಸಾರಿ ಮಿಸ್ಟರ್ ಹನುಮೇಗೌಡರೆ, ಗಮನಕ್ಕೆ ತನ್ನಿ ನಾನು ಗಂಭೀರವಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.*

*(ಗೊಂದಲ)*

*ಅಧ್ಯಕ್ಷರು: ನನಗೆ ಕಳಿಸಿಕೊಡಿ ಎಂದು ಹೇಳಿದ್ದಾರೆ. ಪುನಃ ಇನ್ನೊಂದು ಸಲ ಕಳಿಸಿಕೊಡಿ.*

*(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.*

*ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೆ, 15ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 109 ಪ್ರಶ್ನೆಗಳ ಪೈಕಿ 9 ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.*

*ಅಧ್ಯಕ್ಷರು: ಮಂಡಿಸಲಾಯಿತು.*

*ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳು*

*1657 (2318) ಶ್ರೀ ಆಶೋಕ್ ಆರ್ (ಉತ್ತರಹಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:-*

*ಅ) ಕಳೆದ 2 ವರ್ಷಗಳಲ್ಲಿ ನಬಾರ್ಡ್ ಆರ್ಥಿಕ ನೆರವಿನಲ್ಲಿ ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಗೊಂಡಿರುವ ರಸ್ತೆ, ಒಳಚರಂಡಿ ಮತ್ತು ಇತರೆ ಕಾಮಗಾರಿ ಕೆಲಸಗಳೆಷ್ಟು:*

*ಆ) ಆ ಪೈಕಿ ಪ್ರಸ್ತುತ ಸಾಲಿನಲ್ಲಿ ಯಾವ ಯಾವ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ;*

*ಇ) ಇದರಲ್ಲಿ ಇದುವರೆವಿಗೂ ಪೂರ್ಣವಾಗಿರುವ ಕಾಮಗಾರಿ ಕೆಲಸಗಳೆಷ್ಟು; ಅವು ಯಾವುವು? (ಮಾಹಿತಿ ಒದಗಿಸುವುದು)*

*ಶ್ರೀ ಧರ್ಮ ಸಿಂಗ್ (ಲೋಕೋಪಯೋಗಿ ಸಚಿವರು).*

*ಅ) ಕಳೆದ ಎರಡು ವರ್ಷಗಳಲ್ಲಿ ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಗೊಂಡಿರುವ ಕಾಮಗಾರಿಗಳು ಈ ಕೆಳಕಂಡಂತೆ ಇದೆ.*